www.ecourtsindia.com

# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
## ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.

## ಅಪರಾಧ ಪ್ರಕರಣ ಸಂಖ್ಯೆ 834/2017

**ಚಾಸಾಃ 4 ಪ್ರಾಸಾಃ 3**

ಹೆಸರು : ಜೋಯಲ್ ಜೇಮ್ಸ್

ತಂದೆಯ ಹೆಸರು : ದಿ. ಜಾನ್ ಮೋನಿಸ್

ಪ್ರಾಯ : 33 ವರ್ಷ

ಉದ್ಯೋಗ : ವ್ಯವಹಾರ

ವಾಸ : ಉಜಿರೆ ಗ್ರಾಮ, ಬೆಳ್ತಂಗಡಿ ತಾಲೂಕು

ದಿನಾಂಕ 12-6-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನನಗೆ 1 ನೇ ಆರೋಪಿಯ ಪರಿಚಯ ಇರುತ್ತದೆ. ಉಜಿರೆಯ ಅಜಿತ್ ನಗರದಲ್ಲಿರುವ ನನ್ನ ಮನೆಯನ್ನು 2017 ರಲ್ಲಿ ಬಾಡಿಗೆ ಕಾರಾರು ಮಾಡಿಕೊಂಡು 1 ನೇ ಆರೋಪಿಗೆ ಮಾಸಿಕ ರೂ.2,300 ಗಳಿಗೆ ಬಾಡಿಗೆ ನೀಡಿದ್ದೆನು. ನಾನು ತಕ್ಷೀರು ಸಮಯ ಬೆಂಗಳೂರಿನಲ್ಲಿ ಪ್ರಾಜೆಕ್ಟ್ ಇಂಜಿನೀಯರ್ ಕೆಲಸ ಮಾಡುತ್ತಿದ್ಧೆ. ಪೊಲೀಸರು ನನಗೆ ಕರೆ ಮಾಡಿ ನನ್ನ ಮನೆಯಲ್ಲಿ ಬಾಡಿಗೆ ಇದ್ದ 1 ನೇ ಆರೋಪಿ ಕಳ್ಳತನ ಮಾಡಿ ಸಿಕ್ಕಿ ಬಿದ್ದಿರುವುದಾಗಿ ತಿಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಕಡತದಲ್ಲಿದ್ದ ಬಾಡಿಗೆ ಕಾರಾರಿನ ನಕಲು ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, 1 ನೇ ಆರೋಪಿಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿದ್ದು ಸಾಕ್ಷಿಯು ಅವರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿಗಳ ಪರ ಕು. ಯಕ್ಷಿತ ವಕೀಲರಿಂದಃ

ಬಾಡಿಗೆ ಕರಾರನ್ನು ಎಲ್ಲಿ ತಯಾರು ಮಾಡಲಾಗಿರುತ್ತದೆ ಎಂದು ನೆನಪಿರುವುದಿಲ್ಲ. ಬಾಡಿಗೆ ಕಾರರನ್ನು ತಯಾರು ಮಾಡುವಾಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ನಾನು ಯಾವುದೇ ಬಾಡಿಗೆ ಕಾರರಾನ್ನು 1 ನೇ ಆರೋಪಿಯೊಂದಿಗೆ ಮಾಡಿಕೊಂಡಿರುವುದಿಲ್ಲ, ಅದಲ್ಲಿರುವ ಸಹಿ ಆರೋಪಿಯದಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರರು ಪತ್ರದ ಮೂಲ ಪ್ರತಿಯನ್ನು

This is a True Copy of the Court Records Online. Authenticated @ districts.ecourtsindia.com/cnr/KADK510015592017/truecopy/order-3.pdf

ನಾನು ಪೊಲೀಸರಿಗೆ ನೀಡಿರುತ್ತೇನೆ. ಪೊಲೀಸರು ಹೇಳಿದ ಮೇರೆಗೆ ಈ ಪ್ರಕರಣದ ವಿಚಾರ ತಿಳಿದು ಬಂದಿರುತ್ತದೆ ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಗೊತ್ತಿರುವುದಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆಳರಚ್ಚು ಮಾಡಲಾಯಿತು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

**(ಸಾ. ಓ. ಹೇ. ಕೇ. ಸ. ಇ. ಎ. ಒ.)**

This is a True Copy of the Court Records Online. Authenticated @ districts.ecourtsindia.com/cnr/KADK510015592017/truecopy/order-3.pdf